# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

## ವಾರ್ಷಿಕ ವರದಿ
## ಮತ್ತು
## ನಿರ್ವಹಣಾ ಆಯವ್ಯಯ ಪತ್ರ ೨೦೦೯-೧೦










ನವನಗರ, ಹುಬ್ಬಳ್ಳಿ-೫೮೦ ೦೨೫. ದೂರವಾಣಿ : ೨೨೨೨೦೯೮, ೨೨೨೨೫೯೨,
ಫ್ಯಾಕ್ಸ: ೦೮೩೬-೨೩೭೩೧೫೧ ಜಾಲತಾಣ: www.kslu.ac.in

# ಪರಿವಿಡಿ

## ಅಧ್ಯಾಯ–1

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಾರ್ಷಿಕ ವರದಿ 2009–10 ಪುಟ


1.1 ಸ್ಥಾಪನೆ 1
1.2 ಸ್ಥಳ 1
1.3 ಮಾನ್ಯತೆ 1
1.4 ರಾಷ್ಟ್ರೀಯತಾ ಭಾವ 1
1.5 ಪ್ರಜಾತಾಂತ್ರಿಕ ನಡೆ 1
1.6 ಶೈಕ್ಷಣಿಕ ಚಟುವಟಿಕೆ 2
1.7 ಪ್ರಸ್ತಾವಿತ ಶಿಕ್ಷಣಗಳು 2
1.8 ಕೆ.ಎಸ್.ಎಲ್.ಯು.ಕಾನೂನು ಶಾಲೆ 3
1.8.1 ಕ್ರೀಡೆ 4
1.8.2 ಕಾನೂನು ಸಾಕ್ಷರತೆ 4
1.8.3 ಸಾಂಸ್ಕೃತಿಕ ಚಟುವಟಿಕೆ 4
1.9 ಗ್ರಂಥಾಲಯ 4
1.10 ಮೊದಲ ಪರೀಕ್ಷೆ 4
1.11 ಆರ್ಥಿಕ ಮುನ್ನೋಟ 5
1.11.1 ಅನುದಾನ 5
1.11.2 ಖರ್ಚು–ವೆಚ್ಚ 5
1.12 ಆದ್ಯಗಮನ 5
ಅನುಬಂಧ 6
ಪ್ರಶಾಸನಸಭಾ ಸದಸ್ಯರು 6
ಶೈಕ್ಷಣಿಕ ಮಂಡಳಿ ಸದಸ್ಯರು 7
ಪರಿನಿಯಮಿತ ಪ್ರಾಧಿಕಾರಿಗಳು 8
ಕೆ.ಎಸ್.ಎಲ್.ಯು ಕಾನೂನು ಶಾಲೆ ಬೋಧಕ ವೃಂದ 8


## ಅಧ್ಯಾಯ–2

ನಿರ್ವಹಣಾ ಆಯ–ವ್ಯಯಪತ್ರ 2009–10


2.1 ಆಯ–ವ್ಯಯದ ಮುನ್ನೇರ್ಪಾಡು 9
2.2 ಖರ್ಚು 9
2.3 ಸಾಧನೆ 10
2.4 ಸ್ಥಿರಾಸ್ತಿ 10
2.5 ಚರಾಸ್ತಿ 11

# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಾರ್ಷಿಕ ವರದಿ 2009–10

**1.1 ಸ್ಥಾಪನೆ:–**

ಕಾನೂನು ಶಿಕ್ಷಣ ಜನಪರ, ಹಾಗೂ ಗುಣಾತ್ಮಕ ಶಿಕ್ಷಣವಾಗಬೇಕು, ಎಲ್ಲರಿಗೂ ಸುಲಭದರದಲ್ಲಿ ಲಭಿಸಿ ಸಾಮಾಜಿಕ ಹೊಣೆಯರಿತ, ಸದಾಜಾಗೃತ, ಸಮುದಾಯ ಸೃಜಿತವಾಗಬೇಕು, ಭಾರತ ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಅಂದರೆ ಜಾಗತಿಕ ಸವಾಲುಗಳನ್ನು ಮನದಲ್ಲಿರಿಸಿಕೊಂಡು "ಭಾರತೀಯ ಬೇರು ಜಾಗತಿಕ ಮೇರು" ಉಕ್ತಿಗೆ ಅನ್ವರ್ಥವಾಗಿ, ಶಿಕ್ಷಣ ಪದ್ಧತಿ ಯೋಜನೆ ವೃತ್ತಿಪರ ಕುಶಲಿ ಹಾಗೂ ಸತ್ವಜ ವಿದ್ಯಾರ್ಥಿ ಸಮೂಹವನ್ನು ರೂಪಿಸುವ ಸದಾಶಯದೊಂದಿಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಸ್ಥಾಪಿತವಾಗಿ ಕರ್ನಾಟಕ ಇತಿಹಾಸ ಪುಟದಲ್ಲಿ ನೂತನ ಪರಂಪರೆಗೆ ಅಡಿಯಿಟ್ಟಿದೆ. ಇದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ,2009 ರನುಸಾರ ಜನವರಿ 2009 ರಂದು ಸ್ಥಾಪಿತವಾಯಿತು ಡಾ.ಜೆ.ಎಸ್.ಪಾಟೀಲರು ಇದರ ಮೊದಲ ಕುಲಪತಿಗಳು,

**1.2 ಸ್ಥಳ:–**

ವಿಶ್ವವಿದ್ಯಾಲಯವು ಹುಬ್ಬಳ್ಳಿ–ಧಾರವಾಡ ಮಹಾನಗರದ ನಡುವೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಬಳಿ ಸುಮಾರು 53.23ಎಕರೆ ವಿಶಾಲ ಪ್ರದೇಶದಲ್ಲಿ ನೆಲೆಗೊಂಡಿದೆ, ಹುಬ್ಬಳ್ಳಿ–ನವನಗರದಲ್ಲಿರುವ ರಸ್ತೆ ಸಾರಿಗೆ ಕಛೇರಿ (ಆರ್.ಟಿ.ಓ) ಸಮೀಪ ಇದರ ಆಡಳಿತ ವಿಭಾಗವಿದೆ. ಬರುವ ದಿನಗಳಲ್ಲಿ ವಿಶ್ವವಿದ್ಯಾಲಯವು ತನ್ನದೇ ಆದ ಕಾರ್ಯಸೌಧ, ಕಾನೂನು ಶಾಲೆ, ಸಭಾಂಗಣ, ವಿದ್ಯಾರ್ಥಿ–ವಿದ್ಯಾರ್ಥಿನಿಯರವಸತಿ ನಿಲಯ, ಅತಿಥಿ ಗೃಹ, ಸಿಬ್ಬಂದಿ ವಸತಿಗೃಹಗಳು ಉಪಹಾರ ಮಂದಿರ, ಒಳಾಂಗಣ ಕ್ರೀಡಾ ಸಮೂಚ್ಚಯ, ಜಿಮಖಾನ ಕ್ಲಬ್ ಮತ್ತು ಇನ್ನಿತರ ಕಟ್ಟಡಗಳನ್ನು ಹೊಂದಲಿದೆ.

**1.3 ಮಾನ್ಯತೆ:–**

ನಮ್ಮ ವಿಶ್ವವಿದ್ಯಾಲಯಕ್ಕೆ ತಾತ್ಕಾಲಿಕ ಮಾನ್ಯತೆಯನ್ನು ಕಲಂ2A, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಅಧಿನಿಯಮ, 1956ರ ಪ್ರಕಾರ ಯು.ಜಿ.ಸಿ ಯವರು–ಪತ್ರಸಂಖ್ಯೆ: UGC No.F 9-34/2009(CPP-1PU) dated 03-feb 2010- ಹಾಗೂ ಭಾರತ ವಕೀಲರ ಪರಿಷತ್– ಪತ್ರ ಸಂಖ್ಯೆ BCI D:1300/2009(LE:Mtg) dated 09.09.2009- ನೀಡಿದೆ.

**1.4 ರಾಷ್ಟ್ರೀಯತಾ ಭಾವ:–**

ವಿಶ್ವ ವಿದ್ಯಾಲಯದಲ್ಲಿನ ವಿದ್ಯಾರ್ಥಿಗಳು ಹಾಗೂ ನೌಕರರು ಖಾದಿ ಧಿರಿಸನ್ನು ಧರಿಸಿ ರಾಷ್ಟ್ರಗೀತೆ ಹಾಡಿ, ದೇಶಕ್ಕೆ ವಂದಿಸಿ, ದೈನಂದಿನ ಚಟುವಟಿಕೆ ಆರಂಭಿಸುವ ಮೂಲಕ ಉನ್ನತ ಶಿಸ್ತು–ಆದರ್ಶಗಳಿಗೆ ಕಾರಣರಾಗಿದ್ದಾರೆ. ಹೀಗೆ ದೇಶದ ಜನತೆಯಲ್ಲಿ ರಾಷ್ಟ್ರಭಕ್ತಿ ಮತ್ತು ದೇಶಪ್ರೇಮವನ್ನು ಸೃಜಿಸಿ–ಬೆಳೆಸಿ ಘನೀಕರಿಸುವಂತೆ ಮಾಡಿ ಖಾದಿ–ಗ್ರಾಮೋದ್ಯೋಗ ಕೈಗಾರಿಕೆ ಪುನಃ ಮೇಳವಿಸಬೇಕೆನ್ನುವ ದೃಷ್ಟಿಯಿಂದ ವಿಶ್ವವಿದ್ಯಾಲಯ ಎಲ್ಲರನ್ನು ಮನವೊಲಿಸುವತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

**1.5 ಪ್ರಜಾತಾಂತ್ರಿಕ ನಡೆ:–**

ವಿಶ್ವ ವಿದ್ಯಾಲಯದ ನಡೆ–ನುಡಿ ಪ್ರಜಾಭಿಮತ ಪ್ರತೀಕವಾಗಿದೆ. ಸಕಲರ ಸಲಹೆ–ಸೂಚನೆಗಳಿಗೆ ಮನ್ನಣೆಯಿತ್ತು ತನ್ನ ಚಟುವಟಿಕೆಗಳನ್ನು ಯೋಜಿಸಿ–ಅನುಷ್ಠಾನಗೊಳಿಸುವ ಪರಿಪಾಠವನ್ನು ಹುಟ್ಟುಹಾಕಿದೆ. ಮೂರು ವರ್ಷದ ಎಲ್.ಎಲ್.ಬಿ ಮತ್ತು ಐದು ವರ್ಷದ ಎಲ್ಎಲ್.ಬಿ ಪದವಿ ಶಿಕ್ಷಣ ಕುರಿತಾದ ನಿಯಮಗಳು ಮತ್ತು ಘಟಕವಾರು ಪಠ್ಯಕ್ರಮ ಕುರಿತು ಚರ್ಚಿಸಲು ಮೇ 9, 2009 ರಂದು ಆಯೋಜಿಸಿದ್ದ ಪ್ರಥಮ ಅಖಿಲ ಕರ್ನಾಟಕ ಕಾನೂನು ಮಹಾ ವಿದ್ಯಾಲಯದ ಪ್ರಾಂಶುಪಾಲರುಗಳ ಸಮಾವೇಶ, ವಿಶ್ವ ವಿದ್ಯಾಲಯದ ಕ್ರೀಡಾ ನೀತಿ ರಚಿಸಲು ನವೆಂಬರ್ 11 2009 ರಂದು ಕರೆದಿದ್ದ ಎಲ್ಲಾ ಎಲ್ಲಾ ಕಾನೂನು ಮಹಾವಿದ್ಯಾಲಯಗಳ ಕಾರ್ಯಕ್ರಮ ಸಂಯೋಜನಾಧಿಕಾರಿಗಳ ಸಭೆ ಈ ದಿಶೆಯಲ್ಲಿ ಮಾಡಿದ ಪ್ರಯತ್ನಗಳಿಗೆ ಸಾಕ್ಷಿಯಾಗಿವೆ.

## 1.6 ಶೈಕ್ಷಣಿಕ ಚಟುವಟಿಕೆ:–

ಶೈಕ್ಷಣಿಕ ಪ್ರಗತಿಯ ಬಗೆಗೆ ವಿಶ್ವ ವಿದ್ಯಾಲಯ ತುಂಬಾ ಆಸಕ್ತಿ ವಹಿಸಿದೆ. ಪಠ್ಯ–ಕ್ರಮಗಳ ರೂಪರೇಷೆ ಕುರಿತಾಗಿ ಎಲ್ಲಾ ಕಾನೂನು ಮಹಾವಿದ್ಯಾಲಯಗಳ ಉಪನ್ಯಾಸಕರಿಗೆ "ಸಮಾಜ ಶಾಸ್ತ್ರ ಮತ್ತು ಸಂಶೋಧನಾ ಮೂಲಾಂಶ" ವಿಷಯದ ಮೇಲೆ ಸೆಪ್ಟಂಬರ್16 2009 ರಂದು ಎಸ್.ಡಿ.ಎಂ ಕಾನೂನು ಮಹಾವಿದ್ಯಾಲಯ, ಮಂಗಳೂರಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ ನಡೆಸಲಾಯಿತು. ಪ್ರಚಲಿತ ಜಿಜ್ಞಾಸೆ ಮಾಲಿಕೆಯಡಿಯಲ್ಲಿ "ಮಾಹಿತಿ ಹಕ್ಕು ಮತ್ತು ರ್‍ಯಾಗಿಂಗ್ ಪಿಡುಗು ನಿವಾರಣೆ" ಕುರಿತು ಅಕ್ಟೋಬರ್, 3,2009 ರಂದು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ರಾಜ್ಯದ ವಿವಿಧ ಕಾನೂನು ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಭಾಗಿಯಾಗಿದ್ದರು. ವಿಶ್ವವಿದ್ಯಾಲಯವು ತನ್ನ ಜಾಲತಾಣವನ್ನು (website) **"kslu.ac.in"**- 18 ಜನವರಿ 2010 ರಂದು ಲೋಕಕ್ಕೆ ಅರ್ಪಿಸಿತು. ಭಾರತ ವಕೀಲರ ಪರಿಷತ್ ಮತ್ತು ಕೆ.ಎಸ್.ಎಲ್.ಯು ಕಾನೂನು ಶಾಲೆಯ ಜಂಟಿ ಆಶ್ರಯದಲ್ಲಿ ಕಾನೂನು ಶಿಕ್ಷಣ ನೀತಿ ಕುರಿತು ರಾಷ್ಟ್ರೀಯ ಸಮಾವೇಶವನ್ನು 26–27 ಜನವರಿ, 2010ರಂದು ಆಯೋಜಿಸಲಾಯಿತು.

## 1.7 ಪ್ರಸ್ತಾವಿತ ಶಿಕ್ಷಣಗಳು:–

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ದೇಶದ, ಮುಂಚೂಣಿಯಲ್ಲಿರುವ, ಅತಿ ದೊಡ್ಡ ಸಂಯುಕ್ತ(Federal) ವಿಶ್ವವಿದ್ಯಾಲಯವಾಗಿದೆ. ಇದರ ಪರಿಧಿಯಲ್ಲಿ ರಾಜ್ಯದಲ್ಲಿನ 86 ಕಾನೂನು ಮಹಾವಿದ್ಯಾಲಯಗಳಿವೆ. ಪ್ರಸ್ತುತ, ಐದು ವರ್ಷದ, ದ್ವಿಪದವಿ ಸಂಯುಕ್ತ, ಬಿ.ಎ.ಎಲ್‌ಎಲ್.ಬಿ ಬಿಬಿ.ಎ ಎಲ್‌ಎಲ್.ಬಿ ಪದವಿ ಹಾಗೂ ಸಂವಿಧಾನ, ಬೌದ್ಧಿಕ ಸ್ವತ್ತು ಸ್ವಾಮ್ಯ, ವ್ಯವಹಾರಿಕ ಮತ್ತು ನಿಗಮಿತ ಕಾನೂನು ವಿಷಯದಲ್ಲಿ ಎಲ್‌ಎಲ್.ಎಂ. ಸ್ನಾತಕೋತ್ತರ ಪದವಿ ಶಿಕ್ಷಣಗಳನ್ನು ನೀಡುತ್ತಿದೆ. ಮುಂಬರುವ ವರ್ಷಗಳಲ್ಲಿ ಐದು ವರ್ಷದ ದ್ವಿಪದವಿ ಸಂಯುಕ್ತ ಬಿ.ಕಾಂ. ಎಲ್‌ಎಲ್.ಬಿ, ಬಿ.ಎಸ್ಸಿ ಎಲ್‌ಎಲ್.ಬಿ, ಬಿ.ಟೆಕ್. ಎಲ್‌ಎಲ್.ಬಿ ಎಂ.ಬಿ.ಬಿ.ಎಸ್. ಎಲ್‌ಎಲ್.ಬಿ ಮತ್ತು ನ್ಯಾಯಶಾಸ್ತ್ರ, ಕೌಟುಂಬಿಕ ಕಾನೂನು, ಅಪರಾಧಿಕ ಕಾನೂನು, ವ್ಯವಹಾರಿಕ ಆಡಾಳಿತ ವಿಷಚಯದಲ್ಲಿ ಎಲ್‌ಎಲ್.ಎಂ ಹಾಗೂ ಎಂ.ಫಿಲ್. ಪಿ.ಹೆಚ್.ಡಿ, ಮತ್ತು ಎಲ್‌ಎಲ್.ಡಿ ಪದವಿಗಳ ಶಿಕ್ಷಣ ಪರಿಚಯಿಸಲಿದೆ. ಇದರೊಂದಿಗೆ ಕೆಳಗಿನ ವಿಷಯಗಳಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಮತ್ತು ಸರ್ಟಿಫಿಕೇಟ ವ್ಯಾಸಂಗಗಳನ್ನು ನೀಡಲು ವಿಶ್ವವಿದ್ಯಾಲಯ ಮುಂದಾಗುವುದು.

| ಸ್ನಾತಕೋತ್ತರ ಡಿಪ್ಲೋಮಾ ವ್ಯಾಸಂಗ ವಿಷಯಗಳು | ಸರ್ಟಿಫಿಕೇಟ್ ವ್ಯಾಸಂಗ ವಿಷಯಗಳು |
|---|---|
| 1. ಮಾನವ ಹಕ್ಕುಗಳು | 1) ಅಪರಾಧಿಕ ಕಾನೂನು |
| 2. ಸೈಬರ್ ಮತ್ತು ಮಾಹಿತಿ ತಂತ್ರಜ್ಞಾನ ಕಾನೂನು | 2) ಶ್ರಮಿಕರ ಕಾನೂನು |
| 3. ಬೌದ್ಧಿಕ ಮತ್ತು ಕಾನೂನು | 3) ವೈಯಕ್ತಿಕ ಕಾನೂನು |
| 4. ಮಹಿಳೆ ಮತ್ತು ಕಾನೂನು | 4) ವ್ಯಾಜ್ಯಗಳ ಪರ್ಯಾಯ ಪರಿಹಾರಗಳ ವ್ಯವಸ್ಥೆ |
| 5. ಮಕ್ಕಳು ಮತ್ತು ಕಾನೂನು | 5) ಪಂಚಾಯತ್ ರಾಜ್ ವ್ಯವಸ್ಥೆ |
| 6. ಮಾಹಿತಿ ತಂತ್ರಜ್ಞಾನ ಕುರಿತ ಕಾನೂನು | 6) ಸಾರಿಗೆ ಕಾನೂನು |
| 7. ತೆರಿಗೆ ಕಾನೂನು | 7) ಬೌದ್ಧಿಕ ಸ್ವತ್ತಿನ ಕಾನೂನು |
| 8. ಶ್ರಮಿಕರು ಮತ್ತು ಸೇವಾ ಕಾನೂನು | 8) ಸೈಬರ್ ಕಾನೂನು |
| 9. ಗ್ರಾಹಕರ ಕಾನೂನು | 9) ಮಾಹಿತಿ ತಂತ್ರಜ್ಞಾನ ಕಾನೂನು |
| 10. ಪಂಚಾಯತ್ ರಾಜ್ ಕಾನೂನು | 10) ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ |
| 11. ವ್ಯಾಜ್ಯಗಳ ಪರ್ಯಾಯ ಪರಿಹಾರ ವ್ಯವಸ್ಥೆ | 11) ಪರಿಸರ ಕಾನೂನು |
| 12. ಪ್ರಾಯೋಗಿಕ ಕಾನೂನು ಶಿಕ್ಷಣ | 12) ತೆರಿಗೆ ಕಾನೂನು |
| 13. ಕೌಟುಂಬಿಕ ಕಾನೂನು | 13) ಸ್ಪರ್ಧಾತ್ಮಕ ಕಾನೂನು |
| 14. ವಿಶ್ವ ವ್ಯಾಪಾರ ಸಂಘಟನಾ ಒಡಂಬಡಿಕೆ | 14) ಅಪರಾಧ ಶಾಸ್ತ್ರ ಮತ್ತು ಕಾನೂನು |
| 15. ಖಾಸಗಿ ಅಂತರಾಷ್ಟ್ರೀಯ ಕಾನೂನು | 15) ಮಕ್ಕಳ ಸಂಬಂಧಿ ಕಾನೂನು |
| 16. ಸಾರಿಗೆ ಕಾನೂನು | 16) ಮಹಿಳಾ ಸಂಬಂಧಿ ಕಾನೂನು |
| 17. ಕಾನೂನು ಮತ್ತು ವೈದ್ಯ ಶಾಸ್ತ್ರ | 17) ವಿಭಿನ್ನ ವಿಕಲಚೇತನಾ ಸಂಬಂಧಿ ಕಾನೂನು |
| 18. ಮಾಧ್ಯಮ ಕಾನೂನು | 18) ಮಾಹಿತಿ ಕಾನೂನು |

| | |
|---|---|
| | 19) ಮಧ್ಯಸ್ಥಗಾರಿಕೆ ಕಾನೂನು<br>20) ವಿಶ್ವ ವ್ಯಾಪಾರ ಸಂಘಟನೆ<br>21) ವಿಶ್ವ ಸಂಸ್ಥೆ<br>22) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ<br>23) ಭಾರತ ಮಾನವ ಹಕ್ಕುಗಳ ಕಾನೂನು<br>24) ಅಂತರಾಷ್ಟ್ರೀಯ ಮಾನವ ಹಕ್ಕುಗಳು<br>25) ಯೂರೋಪ್‌ನ ಮಾನವ ಹಕ್ಕುಗಳು<br>26) ಕೌಟುಂಬಿಕ ನ್ಯಾಯಾಲಯಗಳು<br>27) ಕಾನೂನು ಸಾಕ್ಷರತೆ ಮತ್ತು ಕಾನೂನು ನೆರವು<br>28) ಪ್ರಾಯೋಗಿಕ ಕಾನೂನು ಶಿಕ್ಷಣ, ಸಂವಿಧಾನ<br>29) ಬ್ಯಾಂಕಿಂಗ್ ಕಾನೂನು<br>30) ಕಾನೂನು ಮತ್ತು ವೈದ್ಯ ಶಾಸ್ತ್ರ<br>31) ಕಾನೂನು ಮತ್ತು ವಾಸ್ತು ಶಿಲ್ಪ ಶಾಸ್ತ್ರ<br>32) ಕಾನೂನು ಮತ್ತು ಕಂಪ್ಯೂಟರ್ಸ್<br>33) ಉನ್ನತ ಶಿಕ್ಷಣ ಸಂಬಂಧಿ ಕಾನೂನು<br>34) ನಾಗರೀಕ ಸೇವಾ ನಿಯಮಗಳು<br>35) ಸಂಸದೀಯ ಕಾರ್ಯ ವಿಧಾನ<br>36) ಕಾನೂನು ಸಂಶೋಧನಾ ವೈಧಾನಿಕತೆ<br>37) ಅಂತರಿಕ್ಷ ಕಾನೂನು<br>38) ಕಡಲ ಕಾನೂನು<br>39) ಕಡಲ ಸಾರಿಗೆ ಕಾನೂನು<br>40) ವಿಮಾ ಕಾನೂನು<br>41) ಶಾಸನಗಳ ವ್ಯಾಖ್ಯಾನ<br>42) ಅರಣ್ಯ ಮತ್ತು ವನ್ಯಜೀವಿಗಳ ಸುರಕ್ಷಾ ಕಾನೂನು<br>43) ಗ್ರಾಹಕರ ಕಾನೂನು. |

1.8 ಕೆ.ಎಸ್.ಎಲ್.ಯು.ಕಾನೂನು ಶಾಲೆ:-

ಕಾನೂನು ಶಾಲೆ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾಗಿದೆ. ಇದು ವಿಶ್ವವಿದ್ಯಾಲಯದ ಆವರಣದಲ್ಲಿದೆ. ಕಲಿಯುವ-ಕಲಿಸುವ ಕಾರ್ಯ ವಿಧಾನದಲ್ಲಿ ಭಾರತ ಸಂಪ್ರದಾಯಿಕ ಶಿಕ್ಷಣ ಕಲಿಕಾ ಪದ್ಧತಿ ವಿಧಾನದೊಂದಿಗೆ ಆಧುನಿಕ ತಂತ್ರಜ್ಞಾನಗಳನ್ನು ಸಂಕರಗೊಳಿಸಲಾಗಿದೆ. ಈ ವಿಧಾನ ಅಳವಡಿಕೆ ಬಗ್ಗೆ ಎಲ್ಲೆಡೆಯಿಂದ ಮೆಚ್ಚುಗೆಯ ಮಾತುಗಳು ಕೇಳಿಬರುತ್ತಿದೆ. ಉತ್ತಮ ಅಭಿಮತ್ತ ಕಂಡು ಬರುತ್ತಿದೆ. ಶಾಲೆ ಈಗ ಬಿ.ಎ.ಎಲ್.ಎಲ್.ಬಿ ಹಾಗೂ ಬಿ.ಬಿ.ಎ.ಎಲ್‌ಎಲ್.ಬಿ ಮತ್ತು ಸಂವಿಧಾನ ಹಾಗೂ ಬೌದ್ಧಿಕ ಸ್ವತ್ತಿನ ಸ್ವಾಮ್ಯತೆ ವಿಷಯದಲ್ಲಿ ಎಲ್‌ಎಲ್.ಎಂ ಪದವಿ ಶಿಕ್ಷಣ ನೀಡುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಐದು ವರ್ಷದ ಬಿ.ಬಿ.ಎ ಎಲ್‌ಎಲ್.ಬಿ(ಆನರ್ಸ್) ಪದವಿ ಶಿಕ್ಷಣ ನೀಡಲು ಚಿಂತನೆ ನಡೆಸಿದೆ.

ಪಠ್ಯೇತರ ಚಟುವಟಿಕೆಗಳು:- ಅಣುಕು ನ್ಯಾಯಾಲಯ ನಮ್ಮ ವಿದ್ಯಾರ್ಥಿಗಳು ತಮ್ಮ ಮೊದಲ ಸೆಮಿಸ್ಟರನಲ್ಲೇ ಈ ಮುಂದಿನ ಅಣುಕು ನ್ಯಾಯಾಲಯ ಸ್ಪರ್ಧೆಗಳಲ್ಲಿ ಭಾಗಿಯಾಗಿ, ಗಮನಾರ್ಹ ಸಾಧನೆ ಮಾಡಿರುವರು ಅವು- ಎಸ್.ಡಿ.ಎಂ.ಕಾನೂನು ಮಹಾವಿದ್ಯಾಲಯ, ಮಂಗಳೂರು, ಇವರು ಅಕ್ಟೋಬರ್ 11.2009 ರಂದು ಆಯೋಜಿಸಿದ್ದ ಪ್ರಥಮ ಅಖಿಲ ಭಾರತ ಮಟ್ಟದ ದ್ವಂದ್ವ ವಕೀಲಿಕೆ ಅಣುಕು ನ್ಯಾಯಾಲಯ ಸ್ಪರ್ಧೆ, ನವೆಂಬರ್ 6-7-2009ರಂದು ನವದೆಹಲಿಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಯು.ಕೆ.ಸಿ.ಎ ಲಾ ಛೇಂಬರ್ಸ್‌ನ ಸಹಯೋಗದೊಂದಿಗೆ ನಡೆಸಿದ ಪ್ರಥಮ ಅಖಿಲ ಭಾರತ ನಿಗಮಿತ ಕಾನೂನು ಅಣುಕು ನ್ಯಾಯಾಲಯ ಸ್ಪರ್ಧೆ ಹಾಗೂ ನವೆಂಬರ್ 12-14. 2009ರಂದು ಕೇರಳ ಲಾ ಅಕಾಡೆಮಿ, ತ್ರಿವೇಂಡ್ರಮ್, ಇವರು ಹಮ್ಮಿಕೊಂಡಿದ್ದ 10ನೇ ರಾಷ್ಟ್ರೀಯ ಮಟ್ಟದ ಕಕ್ಷಿದಾರರ ಸಮಾಲೋಚನಾ ಸ್ಪರ್ಧೆ, ಈ ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ದೇಶದ ಪ್ರತಿಷ್ಠಿತ ಮಹಾವಿದ್ಯಾಲಯಗಳಾದ-ಅಮಿಟಿ ಕಾನೂನು ಶಾಲೆ, ಸಿಂಬೋಯೋಸಿಸ್ ಹಾಗೂ ಹಿದಾಯತುಲ್ಲಾ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಮಣಿಸಿ ಮೇಲುಗೈ ಸಾಧಿಸಿ ಎಲ್ಲರ ಪ್ರಶಂಸೆಗೆ

ಪಾತ್ರರಾದರು ಇವರ ಸಾಧನೆಗೆ ಪ್ರತೀಕವಾಗಿ ನವದೆಹಲಿಯ ಪ್ರತಿಷ್ಠಿತ ಯು.ಕೆ.ಸಿ.ಎ ಲಾ ಛೇಂಬರ್ಸ್ ನವರು ನಮ್ಮ ವಿದ್ಯಾರ್ಥಿಗಳನ್ನು ಪ್ರಶಿಕ್ಷಣಾರ್ಥಿಗಳನ್ನಾಗಿ ಸ್ವೀಕರಿಸಲು ಒಪ್ಪಿ ಮುಕ್ತ ಆಹ್ವಾನ ನೀಡಿರುವರು ಕೆ.ಎಲ್.ಇ. ಸೊಸೈಟಿಯ ಮೃತ್ಯುಂಜಯ ಕಲೆ, ವಾಣಿಜ್ಯ ಮತ್ತು ಬಿಬಿ.ಎ ಮಹಾವಿದ್ಯಾಲಯ, ಧಾರವಾಡ, ಇವರು ಯು.ಜಿ.ಸಿ. ಸಹಯೋಗದೊಂದಿಗೆ ಸೆಪ್ಟಂಬರ್ 24-25, 2009 ರಂದು "ಉಗ್ರವಾದ ದಮನಿಸುವಲ್ಲಿ ಯುವಕರ ಪಾತ್ರ" ವಿಚಾರ ಕುರಿತು ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ನಮ್ಮ ವಿದ್ಯಾರ್ಥಿಗಳ ವಿಚಾರ ಮಂಡನಾ ವೈಖರಿ ಸಭಿಕರ ಮನಗೆದ್ದಿತು. ಹಾಗೆಯೇ, ಸೆಪ್ಟಂಬರ್ 30,2009 ರಂದು ಹುಬ್ಬಳ್ಳಿಯ ಜೆ.ಎಸ್.ಎಸ್ ಸಕ್ರಿ ಕಾನೂನು ಮಹಾವಿದ್ಯಾಲಯವು ನಡೆಸಿದ ಕ್ವಿಜ್ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳು ನಮ್ಮ ವಿದ್ಯಾರ್ಥಿಗಳಿಗೆ ದೊರಕಿತು.

**1.8.1 ಕ್ರೀಡೆ: –** ನಮ್ಮ ಕಾನೂನು ಶಾಲೆ ಪಾಠ-ಪ್ರವಚನಗಳಿಗೆ ಸರಿಸಾಟಿಯಾಗೆ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತಿದೆ.ತತ್ಫಲವಾಗಿ, ನವೆಂಬರ್ 5-6-2009 ರಂದು ವೈಕುಂಠ ಬಾಳಿಗ ಕಾನೂನು ಮಹಾವಿದ್ಯಾಲಯ ಉಡುಪಿಯಲ್ಲಿ ನಡೆದ ವಾಲಿಬಾಲ್ ಅಂತರ ಮಹಾವಿದ್ಯಾಲಯ ಕ್ರೀಡಾಕೂಟದಲ್ಲಿ ಹಾಗೂ ನವೆಂಬರ್ 13-14, 2009ರಂದು ಬೀದರನ ಆರ್.ವಿ.ಬಿಡಪ ಕಾನೂನು ಮಹಾವಿದ್ಯಾಲಯ ಆಯೋಜಿಸಿದ್ದ ಬ್ಯಾಡ್ಮಿಂಟನ್ ಅಂತರ ಕಾನೂನು ಮಹಾವಿದ್ಯಾಲಯ ಕ್ರೀಡಾ ಕೂಟದಲ್ಲಿ ನಮ್ಮ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕ್ರೀಡಾ ಪ್ರತಿನಿಧಿಗಳಾಗಿ ಆಯ್ಕೆಯಾದರು.

**1.8.2 ಕಾನೂನು ಸಾಕ್ಷರತೆ:–** ಧಾರವಾಡದ ಕ್ಯಾರೇಕೊಪ್ಪ ಗ್ರಾಮದಲ್ಲಿ ಸೆಪ್ಟಂಬರ್ 30, 2009 ರಂದು ಮತ್ತು ಹುಬ್ಬಳ್ಳಿಯ ಸೋಮಾಪುರದಲ್ಲಿ ನವೆಂಬರ್9 2009ರಂದು ಕಾನೂನು ಶಾಲೆಯ ವಿದ್ಯಾರ್ಥಿಗಳು ವಿನ್ಯಾಸಗೊಳಿಸಿ ಆಯೋಜಿಸಿದ್ದ ಕಾನೂನು ಸಾಕ್ಷರತಾ ಕಾರ್ಯಕ್ರಮ ಅವರ ಕ್ರಿಯಾಶೀಲತೆಯನ್ನು ಅಭಿವ್ಯಕ್ತಗೊಳಿಸಿ ಗ್ರಾಮಸ್ಥರ ಹರ್ಷೋದ್ಗಾರಕ್ಕೆ ಪಾತ್ರವಾಯಿತು ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಗ್ರಾಮದ ಹಿರಿಯರು ಕೋರಿಕೊಂಡರು.

**1.8.3 ಸಾಂಸ್ಕೃತಿಕ ಚಟುವಟಿಕೆ:–** ವಿದ್ಯಾರ್ಥಿಗಳಲ್ಲಿನ ಸುಪ್ತಪ್ರತಿಭೆ ಗುರುತಿಸಿ, ಒರೆಗೆ ಹಚ್ಚಿ ಅನಾವರಣಗೊಳಿಸಲು ವೇದಿಕೆ ಸೃಷ್ಟಿಸಿಕೊಡುವುದು ಕಾನೂನು ಶಾಲೆಯ ಮತ್ತೊಂದು ವೈಶಿಷ್ಟ್ಯ ಸೆಪ್ಟಂಬರ್ 9-10-2009ರ ಅಭಿವಿನ್ಯಾಸ ಕಾರ್ಯಕ್ರಮ ಸೆಪ್ಟಂಬರ್ 5, 2009ರ ಶಿಕ್ಷಕರದಿನಾಚರಣೆ, ಅಕ್ಟೋಬರ್ 2,2009ರ ಖಾದಿ ಉತ್ಸವ, ನವೆಂಬರ್ 21, 2009 ವಿದ್ಯಾರ್ಥಿ ಸಂಘ ಮತ್ತು ಜಿಮಖಾನದ ಉದ್ಘಾಟನಾ ಸಮಾರಂಭಗಳ ರೂವಾರಿಗಳು ವಿದ್ಯಾರ್ಥಿಗಳು ಈ ದಿನಗಳಂದು ಅವರ ನಡೆ-ನುಡಿ ಕಾರ್ಯಕ್ರಮದ ರೀತಿ-ನೀತಿ ಒಪ್ಪು-ಓರಣತೆ, ಅಂದಿನ ಅತಿಥಿ ಮಹೋದಯರ ಮೆಚ್ಚುಗೆಗೆ ಪಾತ್ರವಾಯಿತು.

**1.9 ಗ್ರಂಥಾಲಯ:–**

ವಿಶ್ವವಿದ್ಯಾಲಯದ ಆವರಣದಲ್ಲಿ ಇದರ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವಿದೆ. ಇಲ್ಲಿ ಸುಮಾರು ಎಂಟು ಸಾವಿರ ಪುಸ್ತಕಗಳಿವೆ ಹಾಗೂ ಮೂವತ್ತು ಪ್ರತಿಷ್ಠಿತ ನಿಯತಕಾಲಿಕಗಳು ಬರುತ್ತಿವೆ. ಜೊತೆಗೆ ಈ ಪುಸ್ತಕಗಳಿವೆ ಇವುಗಳ ಒಟ್ಟು ಮೌಲ್ಯ ಒಂದು ಕೋಟಿ ಇಪತ್ನಾಲ್ಕು ಲಕ್ಷ ಇಪ್ಪತ್ತೊಂದು ಸಾವಿರ ನೂರು ಅರವತ್ತೈದು ರೂಪಾಯಿಗಳು. ಮುಂದಿನ ದಿನಗಳಲ್ಲಿ ಗ್ರಂಥಾಲಯವನ್ನು ಸಂಪೂರ್ಣವಾಗಿ ಅಂಗುಲೀಕರಿಸಲಾಗುವುದು(digitalize).

**1.10 ಮೊದಲ ಪರೀಕ್ಷೆ:–**

ಆಧುನಿಕ ತಂತ್ರಜ್ಞಾನ ಬಳಸಿ, ಮೊಟ್ಟ ಮೊದಲ ಬಾರಿಗೆ ಜೈವಿಕ ಮಾಪನ (bio metrics) ಅಳವಡಿಸಿ ನಡೆಸಿದ ಪರೀಕ್ಷೆ ಯಾವುದೇ ಅಕ್ರಮಗಳಿಗೆ ಅವಕಾಶಿಸದೆ ನ್ಯೂನರಹಿತವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ನೋಂದಣಿ ಸಂಖ್ಯೆ, ಅಂಕಗಳು, ಸಂಕೇತ, ಸಂಕೇತ ವಿಶ್ಲೇಷಣೆ, ಗಣಕೀಕರಣ ಮತ್ತು ಫಲಿತಾಂಶ ಶೀಘ್ರ ಪ್ರಕಟಣೆಗಾಗಿ ಓ.ಎಂ.ಆರ್ ಕಾಗದ ಬಳಸಿ ತ್ವರಿತವಾಗಿ ಫಲಿತಾಂಶ ಪ್ರಕಟಿಸಲಾಯಿತು. ಇಡೀ ಪ್ರಕ್ರಿಯೆಯನ್ನು ಕೇವಲ 20 ದಿನಗಳಲ್ಲಿ ಪೂರೈಸಿ ಫಲಿತಾಂಶವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ (website) 5-02-2010 ರಂದು ಬಿಡುಗಡೆ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಯಿತು. ವಿದ್ಯಾರ್ಥಿಗಳಿಗೆ ಮಸುಕು-ಮುಕ್ಕಾಗದ ಹಾಗೂ ನೀರಿಗೆ ಹಾಳಾಗದ ಅಂಕಪಟ್ಟಿಯನ್ನು ಕೊಡಲಾಗುವುದು ವಿಶ್ವ ವಿದ್ಯಾಲಯವು ತನ್ನ ಧ್ಯೇಯಗಳನ್ನು ಸಕಾರಗೊಳಿಸುವತ್ತ ಹೆಜ್ಜೆಯಿರಿಸಿ ಕರ್ನಾಟಕ ರಾಜ್ಯ ಜನತೆಗೆ ಗುಣಮಟ್ಟದ ಕಾನೂನು ಶಿಕ್ಷಣ ವಿಸ್ತರಿಸಿ ರಾಜ್ಯವನ್ನು ಸಾಮಾಜಿಕ ಮತ್ತು ಕಾನೂನು ಪ್ರಜ್ಞಾವಂತ ಸಮಾಜವನ್ನಾಗಿ ರೂಪಿಸಲು ಅಹರ್ನಿಶಿ ಶ್ರಮಿಸುತ್ತಿದೆ.

**1.11 ಆರ್ಥಿಕ ಮುನೋಟ:–**

**1.11.1 ಅನುದಾನ:–** ವಿಶ್ವವಿದ್ಯಾಲಯವು 2009–10ನೇ ಸಾಲಿಗೆ ಆಯ–ವ್ಯಯದಲ್ಲಿ ರೂ 2362.00 ಲಕ್ಷಗಳನ್ನು ಮೀಸಲಿರಿಸಿ, ಮಂಜೂರಾತಿ ನೀಡುವಂತೆ ಘನ ಸರ್ಕಾರದ ಮುಂದೆ ಕೋರಿಕೆ ಸಲ್ಲಿಸಿತ್ತು. ನಮ್ಮ ಬೇಡಿಕೆಯನ್ನು ಮನ್ನಿಸಿ ರೂ. 1000.00 ಲಕ್ಷಗಳನ್ನು ಸರ್ಕಾರ ಮಂಜೂರು ಮಾಡಿ–ಪತ್ರ ಸಂಖ್ಯೆ LAW 46 KLM 2009 dated: 14–08–2009 ತದನಂತರ ಹಂತವಾರು ರೂ. 500.00 ಲಕ್ಷಗಳನ್ನು ನೀಡಿ ವಿಶ್ವವಿದ್ಯಾಲಯದ ಪ್ರಗತಿಗೆ ಸಹಕರಿಸಿದೆ.

**1.11.2 ಖರ್ಚು–ವೆಚ್ಚ:–** ವಿಶ್ವವಿದ್ಯಾಲಯದ ಭೂಮಿ, ಕಟ್ಟಡ, ಪೀಠೋಪಕರಣ, ನೆಲೆ ವಸ್ತುಗಳು (fixtures) ಹಾಗೂ ಗ್ರಂಥಾಲಯ ಸಜ್ಜುಗೊಳಿಸಿ ಮೂಲಭೂತ ಅಗತ್ಯಗಳನ್ನು ಅಭಿವೃದ್ಧಿಪಡಿಸಲು ನೀಡಿರುವ ಅನುದಾನವನ್ನು ಉಪಯೋಗಿಸಲಾಗಿದೆ.

**1.12 ಆದ್ಯಗಮನ:–**

ವಿಶ್ವವಿದ್ಯಾಲಯ ತನ್ನ ಧ್ಯೆಯಗಳನ್ನು ನಿಜವಾಗಿಸುವತ್ತ ಶೈಕ್ಷಣಿಕ–ಶೈಕ್ಷಣಿಕೇತರ ಕಾರ್ಯಕ್ರಮಗಳನ್ನು ರೂಪಿಸಿ–ಚಾಲನೆ ನೀಡಲಾರಂಭಿಸಿದೆ. ಈ ದಿಸೆಯಲ್ಲಿ ಬಿ.ಎ. ಎಲ್‌ಎಲ್.ಬಿ, ಬಿ.ಬಿ.ಎ. ಎಲ್‌ಎಲ್.ಬಿ. ಹಾಗೂ ಬೌದ್ಧಿಕ ಸ್ವತ್ತಿನ ಹಕ್ಕುಗಳು ಮತ್ತು ಸಂವಿಧಾನಿಕ ಕಾನೂನು–ವಿಷಯ ಕುರಿತು ಎಲ್.ಎಲ್.ಎಂ ಪದವಿ ಶಿಕ್ಷಣವನ್ನು 2009–10 ಶೈಕ್ಷಣಿಕ ವರ್ಷದಿಂದಲೇ ಕೊಡಲಾರಂಭಿಸಿದೆ. ಮುಂದಿನ 2010–11 ಶೈಕ್ಷಣಿಕ ವರ್ಷದಿಂದ ಬಿ.ಬಿ.ಎ ಎಲ್.ಎಲ್.ಬಿ (ಆನರ್ಸ್) ವಿವಿಧ ವಿಷಯ ಕುರಿತ ಎಲ್.ಎಲ್.ಎಂ. ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಶಿಕ್ಷಣಗಳನ್ನು ನೀಡುವ ಜೊತೆಗೆ ಸಂಶೋಧನೆ ಕಾನೂನು ಅರಿವು–ನೆರವು ಹಾಗೂ ಕಾನೂನು ಸಾಹಿತ್ಯ ಪ್ರಕಾಶನ ಮತ್ತು ಸಂಯೋಜಿತ ಕಾನೂನು ಮಹಾವಿದ್ಯಾಲಯಗಳೊಂದಿಗೆ ಅಂತರ್ಜಾಲ ಸಂಬಂಧ, ಕಛೇರಿ ಆಧುನೀಕರಣ, ಈ–ಗ್ರಂಥಾಲಯ ಸೌಲಭ್ಯ ವಿಸ್ತರಣಾ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವ ಅಭಿಲಾಷೆಯನ್ನು ಹೊಂದಿದೆ.

ಮೇಲಿನ ಎಲ್ಲಾ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಖಾಯಂ ಬೋಧಕ–ಬೋಧಕೇತರ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಅವಶ್ಯಕತೆಯಿದೆ. ಆಗಮಾತ್ರ ಭಾರತ ವಕೀಲರ ಪರಿಷತ್ತಿನ (Bar Council of India) ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (University Grants Commission) ಮಾನ್ಯತೆ ಲಭಿಸಿ ಕೇಂದ್ರ ಸರ್ಕಾರ ಹಾಗೂ ಇನ್ನಿತರ ಸಂಸ್ಥೆಗಳಿಂದ ಅನುದಾನ ಹಾಗೂ ಇತರ ಬಗೆಯ ಸೌಲಭ್ಯ ಮತ್ತು ಸವಲತ್ತುಗಳು ವಿಶ್ವವಿದ್ಯಾಲಯಕ್ಕೆ ಹರಿದು ಬರಲಾರಂಭಿಸುವುದು. ಆದುದರಿಂದ, ತ್ವರಿತವಾಗಿ, ವಿಶ್ವವಿದ್ಯಾಲಯಕ್ಕೆ ತೀರಾ ಅಗತ್ಯವಿರುವ ಬೋಧಕ–ಬೋಧಕೇತರ ಸಿಬ್ಬಂದಿಗಳ ನೇಮಕಾತಿಗೆ ಘನ ಸರ್ಕಾರ ಹಸಿರು ನಿಶಾನೆ ತೋರಿಸಿ, ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಶ್ಯಕತೆಯಿರುವ ಬಂಡವಾಳವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ 2010–11 ಬಿಡುಗಡೆ ಮಾಡಲು ಮುಂದಾಗುದೆನ್ನುವ ಸದಾಶಯ ನಮ್ಮದು. ಈ ನಿಮಿತ್ತ ಆಯ–ವ್ಯಯ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ.

***************

ಅನುಬಂಧ

## ಮಾನ್ಯ ಸಿಂಡಿಕೇಟ್ ಸಭೆಯ ಸದಸ್ಯರುಗಳ ಹೆಸರು ವಿಳಾಸ:

| | |
|---|---|
| 1) ಪ್ರೊ. ವಿ.ಆರ್. ಶಿರೋಳ<br>ಪ್ರಾಚಾರ್ಯರು,<br>ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯ,<br>ಬಾಗಲಕೋಟ. | 2) ಶ್ರೀ ಟಿ.ಎಸ್.ಕ್ಯಾಟಿಹಳ್ಳಿ<br>ವಕೀಲರು,<br>"ನಿತ್ಯಶ್ರೀ",<br>ಡೆಪ್ಯುಟಿ ಚೆನ್ನಬಸಪ್ಪ ನಗರ,<br>ಧಾರವಾಡ-08. |
| 3) ಶ್ರೀ ಬಿ.ವಿ.ಪಾವಟೆ,<br>ವಕೀಲರು,<br>ಫ್ಲ್ಯಾಟ್ ನಂ.301,<br>ಅಕ್ಷಯ ಪಾರ್ಕ, ಎಫ್- ಬ್ಲಾಕ್,<br>ಗೋಕುಲ ರಸ್ತೆ,<br>ಹುಬ್ಬಳ್ಳಿ-580 030. | 4) ಶ್ರೀ ಟಿ.ರಾಮಾನಾಯ್ಕ,<br>ಅಧ್ಯಕ್ಷರು, ಜಿಲ್ಲಾ ಪಂಚಾಯತ,<br>"ಧನಲಕ್ಷ್ಮಿ ಮೆಘಾವಾಟ್ ಫಾರಂ"<br>2ನೇ ಕ್ರಾಸ್, ಕೋರ್ಟ ಹಿಂದುಗಡೆ,<br>ಚೆನ್ನಕೇಶವ ನಗರ,<br>ಶಿಕಾರಿಪುರ. |
| 5) ಪ್ರೊ. ಉಷಾ ಮೂರ್ತಿ<br>"ಓಂ ಸಾಯಿ",<br>1ನೇ ಕ್ರಾಸ, ಸಪ್ತಾಪೂರ,<br>ಧಾರವಾಡ-580008. | 6) ಶ್ರೀಮತಿ ಮೀರಾ ಪಡಕೆ,<br>"ಕೌಶಲ್ಯಾ", ನಂ.502/40,<br>54ನೇ ಕ್ರಾಸ್, 3ನೇ ಬ್ಲಾಕ್,<br>ರಾಜಾಜಿನಗರ,<br>ಬೆಂಗಳೂರು-560 010. |
| 7) ಪ್ರೊ.ಎಸ್.ಎಸ್.ಪಾಟೀಲ,<br>ಪ್ರಾಚಾರ್ಯರು,<br>ವುಂಕಿ ಸಣ್ಣ ರುದ್ರಪ್ಪಾ ಕಾನೂನು ಮಹಾವಿದ್ಯಾಲಯ,<br>ಬಳ್ಳಾರಿ-583 130. | 8) ಪ್ರೊ. ಸಿ.ಕೃಷ್ಣಪ್ಪಾ<br>ಪ್ರಾಚಾರ್ಯರು,<br>ಪಿ.ಇ.ಎಸ್. ಕಾನೂನು ಮಹಾವಿದ್ಯಾಲಯ,<br>ಮಂಡ್ಯ |
| 9) ಶ್ರೀ ಎ.ಎಮ್. ಸೂರ್ಯಪ್ರಕಾಶ<br>"ಕ್ಷೀರ ಸಾಗರ"<br>ನಂ.4, ಗ್ರೌಂಡ ಫ್ಲೋರ್,<br>2ನೇ ಮೇನ್, ಶ್ರೀರಾಮ ಪುರಂ,<br>ಬೆಂಗಳೂರು-21. | 10) ಪ್ರೊ. ಅಬ್ದುಲ್ ಕರೀಮ್<br>ಎಮ್.ಐ.ಜಿ.19,<br>ನವನಗರ, ಹುಬ್ಬಳ್ಳಿ-25. |
| 11) ಶ್ರೀ ಎಸ್. ಸಿದ್ದಲಿಂಗೇಶ<br>ಸರಕಾರದ ಕಾರ್ಯದರ್ಶಿಗಳು,<br>ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ<br>ಇಲಾಖೆ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001. | 12) ಶ್ರೀ ಕೆ.ಜಿ.ವಿ ಮೂರ್ತಿ,<br>ಎಡಿಶನಲ್ ಸೆಕ್ರೆಟರಿ,<br>ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ<br>ಇಲಾಖೆ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001. |
| 13) ಡಾ.ಎನ್. ನಾಗಲಂಬಿಕಾ ದೇವಿ<br>ಕಮೀಶನರ್,<br>ಕಾಲೇಜಿಯೇಟ್ ಎಜ್ಯುಕೇಶನ್,<br>ಬೆಂಗಳೂರು-560001. | 14) ಜೆ.ಕೆ.ಬೋರೆಗೌಡಾ<br>ಸರಕಾರದ ಕಾರ್ಯದರ್ಶಿಗಳು,<br>ಸಂಸದೀಯ ವ್ಯವಹಾರಗಳ ಸಚಿವಾಲಯ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001 |
| 15) ಶ್ರೀ. ರಿಚರ್ಡ ಲೋಬೋ<br>ಎಡಿಶನಲ್ ಸೆಕ್ರೆಟರಿ,<br>ಸಂಸದೀಯ ವ್ಯವಹಾರಗಳ ಸಚಿವಾಲಯ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001 | |

# ಅಕ್ಯಾಡೆಮಿಕ್ ಕೌನ್ಸಿಲ್

| | |
|---|---|
| 1) ಜೆ.ಕೆ.ದೋರೆಗೌಡಾ<br>ಸರಕಾರದ ಕಾರ್ಯದರ್ಶಿಗಳು,<br>ಸಂಸದೀಯ ವ್ಯವಹಾರಗಳ ಸಚಿವಾಲಯ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001. | 2) ಡಾ.ಎನ್.ನಾಗಾಂಬಿಕಾ ದೇವಿ<br>ಕಮೀಶನರ್,<br>ಕಾಲೇಜಿಯೇಟ್ ಎಜ್ಯುಕೇಶನ್,<br>ಬೆಂಗಳೂರು-560001 |
| 3) ಪ್ರೋ.ಎಸ್.ಎಸ್.ಪಾಟೀಲ,<br>ಪ್ರಾಚಾರ್ಯರು,<br>ವ್ಪಂಕಿ ಸಣ್ಣ ರುದ್ರಪ್ಪಾ ಕಾನೂನು ಮಹಾವಿದ್ಯಾಲಯ,<br>ಬಳ್ಳಾರಿ-583 130. | 4) ಪ್ರೋ.ಜೆ.ಆರ್.ತಳಗೇರಿ,<br>ಎಮ್.ಇ.ಎಸ್. ಕಾನೂನು ಮಹಾವಿದ್ಯಾಲಯ,<br>ಶಿರ್ಶಿ-581402. |
| 5) ಪ್ರೋ.ವಿ.ಸಿ.ಮಠಪತಿ,<br>ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯ,<br>ಕೋರ್ಟ ರೋಡ್,<br>ಗುಲಬರ್ಗಾ. | 6) ಪ್ರೋ. ಹಿಮಲಾಕ್ಷಿ ಪಿ.ಕೆ.<br>ವಿ.ವಿ.ಪುರಂ ಕಾನೂನು ಮಹಾವಿದ್ಯಾಲಯ,<br>ಶ್ರೀಗಂಧದ ಕಾವಲ ಓಟರ ರಿಂಗ ರೋಡ,<br>ಮಾಗಡಿ ಮೇನ್ ರೋಡ,<br>ಬೆಂಗಳೂರು-560091. |
| 7) ಪ್ರೋ.ಎಸ್.ಎಮ್.ರಂಜಣ್ಣ<br>ಬಿ.ಇ.ಎಸ್. ಕಾನೂನು ಮಹಾವಿದ್ಯಾಲಯ,<br>16ನೇ ಮೇನ್, 4ನೇ ಬ್ಲಾಕ್,<br>ಜಯನಗರ,<br>ಬೆಂಗಳೂರು-560011. | 8) ಶ್ರೀ ಎಸ್. ಸಿದ್ಧಲಿಂಗೇಶ<br>ಸರಕಾರದ ಕಾರ್ಯದರ್ಶಿಗಳು,<br>ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ,<br>ಕರ್ನಾಟಕ ಸರಕಾರ,<br>ವಿಧಾನಸೌಧ, ಬೆಂಗಳೂರು-560001. |
| 9) ಡಾ ಆರ್.ವೆಂಕಟ ರಾವ್,<br>ನಿರ್ದೇಶಕರು,<br>ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ,<br>ನಾಗರಭಾವಿ, ಪೋಸ್ಟ ಬ್ಯಾಗ 7201,<br>ಬೆಂಗಳೂರು-560242. | 10) ಪ್ರೋ. ಸಿ.ಕೃಷ್ಣಪ್ಪಾ<br>ಪ್ರಾಚಾರ್ಯರು,<br>ಪಿ.ಇ.ಎಸ್. ಕಾನೂನು ಮಹಾವಿದ್ಯಾಲಯ,<br>ಮಂಡ್ಯ |
| 11) ಪ್ರೋ. ವಿ.ಆರ್. ಶಿರೋಳ<br>ಪ್ರಾಚಾರ್ಯರು,<br>ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯ,<br>ಬಾಗಲಕೋಟ. | 12) ಪ್ರೋ.ಎಸ್.ಬಿ.ಐತ್ತಿ,<br>ಬೆಂಗಳೂರ ಇನ್ಸ್ಟಿಟ್ಯೂಟ್ ಆಫ್ ಲೀಗಲ್<br>ಸ್ಟಡೀಸ, ವಿಜಯಾ ಕಾಲೇಜ ಕ್ಯಾಂಪಸ್,<br>ಆರ್.ವಿ. ರೋಡ್, ಬಸವನಗುಡಿ,<br>ಬೆಂಗಳೂರು-560004. |
| 13) ಪ್ರೋ.ಕೆ.ಎಸ್.ಸುರೇಶ<br>ಜೆ.ಎಸ್.ಎಸ್. ಕಾನೂನು ಮಹಾವಿದ್ಯಾಲಯ,<br>ನ್ಯೂ ಕಾಂತ್ರಾಜೆ ಅರಸ ರೋಡ,<br>ಕುವೆಂಪು ನಗರ,<br>ಮೈಸೂರು-570009 | 14) ಪ್ರೋ.ಆರ್.ಹರೀಶ,<br>ಬಿ.ಎಮ್.ಎಸ್. ಕಾನೂನು ಮಹಾವಿದ್ಯಾಲಯ,<br>ನಾರ್ಥ ಆಂಜನೇಯ ಟೆಂಪಲ್ ಸ್ಟ್ರೀಟ್,<br>ಬಸವನಗುಡಿ,<br>ಬೆಂಗಳೂರು-560001. |
| 16) ರಜಿಸ್ಟ್ರಾರ ಜನರಲ್,<br>ಹೈ ಕೋರ್ಟ ಆಫ್ ಕರ್ನಾಟಕ,<br>ಬೆಂಗಳೂರು-560001. | 17) ಶ್ರೀ ಜೆ.ವಿದ್ಯಾಸಾಗರ,<br>ಕುಲಸಚಿವರು,<br>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,<br>ಹುಬ್ಬಳ್ಳಿ |
| 18) ಶ್ರೀ ಸಿ.ಎಸ್. ಪಾಟೀಲ,<br>ಗ್ರಂಥಪಾಲಕರು,<br>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,<br>ಹುಬ್ಬಳ್ಳಿ | 19) ಶ್ರೀ ಎ.ಆರ್.ಪಾಟೀಲ<br>ಆಂಜನೇಯ ನಗರ,<br>ಮಾಳಮಾರುತಿ ಎಕ್ಸಟೇನಶನ್,<br>ಬೆಳಗಾವಿ. |
| 20) ಶ್ರೀ ಸಂಗಣ್ಣ ಕರಡಿ,<br>ಮೆಂಬರ್ ಆಫ್ ಲೆಜಿಸ್ಲೇಟಿವ ಅಸೆಂಬ್ಲಿ,<br>ಕೊಪ್ಪಾ | 21) ಶ್ರೀ ಎ.ಎಸ್.ಶ್ರೀಕಾಂತ,<br>ಪ್ರಿನ್ಸಿಪಾಲ್ ಸೆಕ್ರೆಟರಿ ಟು ಗೌರ್‍ನಮೆಂಟ್,<br>ಎಜ್ಯುಕೇಶನ್ ಡಿಪಾರ್ಟಮೆಂಟ್ (ಹೈಯರ್ ಎಜ್ಯುಕೇಶನ್),<br>ಕರ್ನಾಟಕ ಸರಕಾರ,<br>ಎಮ್.ಎಸ್. ಬಿಲ್ಡಿಂಗ್,<br>ಡಾ.ಅಂಬೇಡ್ಕರ ವೀದಿ,<br>ಬೆಂಗಳೂರು-560001 |

| | |
|---|---|
| 22) ಶ್ರೀ ಜಿ.ವಿ.ಹೆಗಡೆ,<br>ಹಣಕಾಸು ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,<br>ಹುಬ್ಬಳ್ಳಿ | 23) ಶ್ರೀ ಮೋಹನ ಲಿಂಬಿಕಾಯಿ<br>ಮೆಂಬರ ಆಫ್ ಲೆಜಿಸ್ಲೇಟಿವ ಕೌನ್ಸಿಲ್,<br>ನಂ.225, ಭವಾನಿ ಆರ್ಕೇಡ್,<br>ಬಸವ ವನದ ಎದುರು, ಹಳೇ ಬಸ್ ನಿಲ್ದಾಣದ ಎದುರು,<br>ಹುಬ್ಬಳ್ಳಿ–580029. |
| 24) ಶ್ರೀ ಅರುಣ ಜೋಶಿ,<br>ವಕೀಲರು,<br>2ನೇ ಮಹಡಿ, ಗೀತಾ ಕಾಂಪ್ಲೆಕ್ಸ,<br>ಪಿ.ಬಿ.ರೋಡ್,<br>ಧಾರವಾಡ. | 25) ಶ್ರೀ ವೀರಣ್ಣಾ ಚರಂತಿಮಠ,<br>ಮೆಂಬರ ಆಫ್ ಲೆಜಿಸ್ಲೇಟಿವ ಅಸೆಂಬ್ಲಿ,<br>ಬಾಗಲಕೋಟ |

## ಪರಿನಿಯಮಿತ ಪ್ರಾಧಿಕಾರಿಗಳು

| | | | |
|---|---|---|---|
| 1 | ಡಾ.ಜೆ.ಎಸ್. ಪಾಟೀಲ<br>ಕುಲಪತಿಗಳು ಕೆ.ಎಸ್.ಎಲ್.ಯು<br>ನವನಗರ, ಹುಬ್ಬಳ್ಳಿ–25 | 2 | ಶ್ರೀ. ಜಿ. ವಿದ್ಯಾಸಾಗರ<br>ಕುಲಸಚಿವರು<br>ಕೆ.ಎಸ್.ಎಲ್.ಯು<br>ನವನಗರ, ಹುಬ್ಬಳ್ಳಿ–25 |
| 3 | ಡಾ. ಸುರೇಶ.ವಿ.ನಾಡಗೌಡರ್<br>ಕುಲಸಚಿವರು(ಮೌಲ್ಯಮಾಪನ)<br>ಕೆ.ಎಸ್.ಎಲ್.ಯು<br>ನವನಗರ, ಹುಬ್ಬಳ್ಳಿ–25 | 4 | ಶ್ರೀ. ಜಿ.ವಿ.ಹೆಗಡೆ<br>ಹಣಕಾಸು ಅಧಿಕಾರಿಗಳು<br>ಕೆ.ಎಸ್.ಎಲ್.ಯು<br>ನವನಗರ, ಹುಬ್ಬಳ್ಳಿ–25 |

## ಕೆ.ಎಸ್.ಎಲ್.ಯು ಕಾನೂನು ಶಾಲೆ ಬೋಧಕ ವೃಂದ

| | | | |
|---|---|---|---|
| 1 | ಶ್ರೀ.ಸಿ.ಎಸ್.ಮಂಜಪ್ಪಾ<br>ನಿರ್ದೇಶಕರು | 2 | ಶ್ರೀ.ಮಲಯ್ಯ.ಎಂ.ಆರ್<br>ಅಧ್ಯಾಪಕರು ಮತ್ತು ವಿಶೇಷಾದಿಕಾರಿ |
| 3 | ಶ್ರೀ.ಸಂಜೀವೆಗೌಡಾ.ಜಿ.ಎಸ್<br>ಅಧ್ಯಾಪಕರು ಮತ್ತು ವಿಶೇಷಾದಿಕಾರಿ | 4 | ಕುಮಾರಿ. ಶೃತಿ. ಶುರಪಾಲಿ<br>ಅಧ್ಯಾಪಕರು ಮತ್ತು ವಿಶೇಷಾದಿಕಾರಿ |
| 5 | ಶ್ರೀ. ಮಹೇಶ. ಜಂತ್ಲಿ<br>ಅಧ್ಯಾಪಕರು | 6 | ಶ್ರೀ. ವಿಜಯಾಕುಮಾರ ಎಸ್.<br>ಅಧ್ಯಾಪಕರು ಮತ್ತು ವಿಶೇಷಾದಿಕಾರಿ |
| 7 | ಶ್ರೀಮತಿ. ವಾಣಿ ಎಸ್. ಮರಡಿ<br>ಅಧ್ಯಾಪಕರು ಮತ್ತು ವಿಶೇಷಾದಿಕಾರಿ | 8 | ಶ್ರೀ. ಬಾಬುಲಾಲ ಆರ್. ದರಗದ್<br>ಅಧ್ಯಾಪಕರು |
| 9 | ಶ್ರೀ. ಈರನಗೌಡ್ ಕೆ. ಕಬ್ಬೂರ್<br>ಅಧ್ಯಾಪಕರು | 10 | ಶ್ರೀ.ಮನೋಜ. ವಿ. ಹಿರೇಮಠ<br>ಸಂಶೋಧಕರು |

## ನಿರ್ವಹಣಾ ಆಯ-ವ್ಯಯ ಪತ್ರ 2009-10

2.1 ಆಯ-ವ್ಯಯದ ಮುನ್ನೇರ್ಪಾಡು :-

2009-10ನೇ ಸಾಲಿಗೆ ರೂ.2362.00 ಲಕ್ಷಗಳನ್ನು ಆಯ-ವ್ಯಯದಲ್ಲಿ ಮೀಸಲಿರಿಸುವಂತೆ ಕೋರಿ ಘನ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಬೇಡಿಕೆ ಸಲ್ಲಿಸಿತ್ತು. ಇದಕ್ಕೆ ಸ್ಪಂದಿಸಿದ ಘನ ಸರ್ಕಾರ ರೂ.1000.00 ಲಕ್ಷಗಳ ಆಯ-ವ್ಯಯ ಅನುದಾನ ಮಂಜೂರಾತಿಗೆ ಒಪ್ಪಿಗೆ ನೀಡಿ ಪತ್ರ – ಸಂಖ್ಯೆ ಲಾ 46 ಕೆಎಲ್ಎಮ್ 2009 ದಿನಾಂಕ 14.8.2009 ಕಳುಹಿಸಿ, ತರುವಾಯ ರೂ.500.00 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿ ವಿಶ್ವವಿದ್ಯಾಲಯದ ಪ್ರಗತಿಗೆ ಸಹಕರಿಸಿದೆ. ಅದರ ವಿವರ ಇಂತಿದೆ.

| ಸರ್ಕಾರಿ ಆದೇಶ ಪತ್ರ ಸಂಖ್ಯೆ | ಮೊತ್ತ (ಲಕ್ಷಗಳಲ್ಲಿ) |
|---|---|
| LAW/39/KLM/2009 dated: 22-5-2009 | 15.00 |
| LAW/46/KLM/2009 dated: 24-6-2009 | 110.00 |
| LAW/46/KLM/2009 dated: 28-10-2009 | 200.00 |
| LAW/46/KLM/2009 dated: 30-12-2009 | 50.00 |
| LAW/46/KLM/2009 dated: 1-2-2010 | 125.00 |
| **Total** | **500.00** |

2.2 ಖರ್ಚು:-

ಮೊತ್ತ(ಲಕ್ಷಗಳಲಿ)

| ಕ್ರಮ. ಸಂಖ್ಯೆ | ಲೆಕ್ಕ ಶೀರ್ಷಿಕೆ | ವಿನಿಯೋಜನೆ | ಜನವರಿ 10, 2010ರ ಅಂತ್ಯಕ್ಕೆ ಖರ್ಚು | ಪ್ರಸ್ತಾವಿತ ಪರಿಷ್ಕೃತ ಆಯ-ವ್ಯಯ | ಷರಾ |
|---|---|---|---|---|---|
| 1 | ಕಟ್ಟಡ | 050.00 | 147.05 | 244.00 | ರೂ 144.00 ಲಕ್ಷಗಳಿಗೆ ಮಹಾನಗರ ಪಾಲಿಕೆಯಿಂದ ಕಟ್ಟಡ ಸಹಿತ ಎರಡು ಎಕರೆ ಭೂಮಿಯನ್ನು ಖರೀದಿಸಲಾಗಿದೆ. |
| 2 | ಅಡಿ ಸಂರಚನೆ | 100.00 | 70.63 | 100.00 | ಪೀಠೋಪಕರಣ ಗಣಕಯಂತ್ರ ಹಾಗೂ ಇತರ ಉಪಕರಣಗಳು. |
| 3 | ಗ್ರಂಥಾಲಯ | 100.00 | 88.61 | 100.00 | |
| 4 | ವೇತನ | 100.00 | 45.78 | 106.00 | |
| 5 | ಆವರ್ತಕ ಖರ್ಚು | 150.00 | 71.79 | 174.00 | |
| | ಒಟ್ಟು | **500.00** | **423.86** | **724.00** | |

## 2.3 ಸಾಧನೆ:-

ಮೇಲಿನ ಕೋಷ್ಟಕದಲ್ಲಿ ನಿರೂಪಿಸಿರುವಂತೆ ವಿಶ್ವವಿದ್ಯಾಲಯದ ಕಟ್ಟಡ, ಪೀಠೋಪಕರಣ, ನೆಲೆ ವಸ್ತುಗಳು (fixtures) ಹಾಗೂ ಗ್ರಂಥಾಲಯ ಸಜ್ಜುಗೊಳಿಸಿ ಮೂಲಭೂತ ಅಗತ್ಯಗಳನ್ನು ಅಭಿವೃದ್ಧಿಪಡಿಸಲು ನೀಡಿರುವ ಅನುದಾನವನ್ನು ಉಪಯೋಗಿಸಲಾಯಿತು.

## 2.4 ಸ್ಥಿರಾಸ್ತಿ:-

ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯು ಹುಬ್ಬಳ್ಳಿ ತಾಲೂಕು ನವನಗರದಲ್ಲಿನ(ಅಮರಗೋಳ ಗ್ರಾಮ) ಸರ್ವೆ ನಂ.ಬ್ಲಾಕ್ ಸಂಖ್ಯೆ-90/211ರಲ್ಲಿ 22-12 ಎಕರೆ ಭೂಮಿಯನ್ನು 221.00 ಲಕ್ಷ ರೂಪಾಯಿಗಳಿಗೆ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿದೆ. ಈ ಭೂಮಿಗೆ ಲಗತ್ತಾಗಿರುವ 22 ಎಕರೆ ಭೂಮಿಯನ್ನು ಘನ ಸರ್ಕಾರ ನೀಡಿದೆ. ಈ ಭೂಮಿಯ ಮಗ್ಗುಲಲ್ಲೇ ಇದ್ದ ಕರ್ನಾಟಕ ರಾಜ್ಯ ಮೀಸಲು ಪೊಲೀಸ ಇಲಾಖೆಗೆ ಸೇರಿದ ಕಟ್ಟಡ ಆದಕ್ಕೆ ಹೊಂದಿಕೊಂಡಿರುವ ಎರಡು ಎಕರೆ ಭೂಮಿಯನ್ನು ಘನ ಸರ್ಕಾರದ ಮಂಜೂರಾತಿಯನುಸಾರ ರೂ.144 ಲಕ್ಷಗಳನ್ನು ಪಾವತಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಖರೀದಿಸಲಾಗಿದೆ. ಅಂತೆಯೇ, ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ 30 ವರ್ಷಗಳ ಗೇಣಿ ಗುತ್ತಿಗೆ ಆಧಾರದ ಮೇಲೆ ಪಡೆದಿರುವ ಅತಿಥಿಗೃಹ ಹಾಗೂ ಅದರ ಸುತ್ತಮುತ್ತಲಿರುವ ಆರು ಎಕರೆ ಭೂಮಿ ವಿಶ್ವವಿದ್ಯಾಲಯದ ಅನುಭವದಲ್ಲಿದೆ. ಇದರ ಸಂಕ್ಷಿಪ್ತ ಚಿತ್ರಣ ಇಂತಿದೆ.

| ಕ್ರಮ ಸಂಖ್ಯೆ | ವಿವರ | ಮೌಲ್ಯ ರೂ. ಲಕ್ಷಗಳಲ್ಲಿ | ವಿಸ್ತೀರ್ಣ |
|---|---|---|---|
| 1 | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಖರೀದಿಸಿದ ಭೂಮಿ | 221.00 | 22-12 ಎಕರೆಗಳು |
| 2 | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಖರೀದಿಸಿದ ಕಟ್ಟಡ-ಭೂಮಿ | 144.00 | 02.00 ಎಕರೆಗಳು ಚದರಡಿಯ ಕಟ್ಟಡ |
| 3. | ಸರ್ಕಾರ ಮಂಜೂರು ಮಾಡಿರುವ ಭೂಮಿ | --- | 22.00 ಎಕರೆಗಳು |
| 4 | ಕರ್ನಾಟಕ ಸರ್ಕಾರದ ಲೋಕೋಪಯೋಗಿ ಎಲಾಖೆಯಿಂದ 30 ವರ್ಷಗಳ ಗೇಣಿ-ಗುತ್ತಿಗೆ ಆಧಾರದ ಮೇಲೆ ಪಡೆದಿರುವ ಅತಿಥಿಗೃಹ ಮತ್ತು ಭೂಮಿ | --- | 06.00 ಎಕರೆಗಳು ಮತ್ತು _____ ಚದರಡಿ ವಿಸ್ತೀರ್ಣವುಳ್ಳ ಅತಿಥಿಗೃಹ |

2.5 ಚರಾಸ್ತಿ:-

ಘನ ಸರ್ಕಾರ ನೀಡಿರುವ ಅನುದಾನ ಬಳಸಿ ಖರೀದಿಸಿರುವ ಚರಸ್ವತ್ತುಗಳ ವಿವರ ಇಂತಿದೆ:

| ಕ್ರಮ ಸಂಖ್ಯೆ | ವಿವರಗಳು | ಮೊಬಲಗು ರೂ. ಲಕ್ಷಗಳಲ್ಲಿ | ಷರಾ |
|---|---|---|---|
| 1 | ವಾಹನಗಳು | 23.55 | ನಾಲ್ಕು ಕಾರುಗಳು |
| 2 | ಕಚೇರಿ ಪೀಠೋಪಕರಣಗಳು | 17.04 | |
| 3 | ಗಣಕ ಯಂತ್ರಗಳು, ಮುದ್ರಣ ಯಂತ್ರಗಳು, ಬೆರಳಚ್ಚು ಯಂತ್ರಗಳು ಮತ್ತು ದರ್ಶಕ ಯಂತ್ರಗಳು | 18.56 | |
| 4 | ಓ ಹೆಚ್ ಪಿ ಮತ್ತು ಎಲ್ ಸಿ ಡಿ ಪ್ರೊಜೆಕ್ಟರಗಳು | 01.08 | |
| 5 | ಕಚೇರಿ ಉಪಕರಣಗಳು | 10.40 | |
| | ಒಟ್ಟು | 70.63 | |

ಗ್ರಂಥಾಲಯ:-

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ವಿಶ್ವವಿದ್ಯಾಲಯದ ಮೂಲಭೂತ ಘಟಕವಾಗಿದೆ. ವಿಶ್ವವಿದ್ಯಾಲಯದ ಶಕ್ತಿ ಗ್ರಂಥಾಲಯದ ಸಾಮರ್ಥ್ಯವನ್ನು ಅವಲಂಬಿಸಿದೆ. ಇದನ್ನು ಸಾಕಾರಗೊಳಿಸುವ ಸಲುವಾಗಿ ರೂ.88.44 ಲಕ್ಷಗಳ ಮೌಲ್ಯದ ಸುಮಾರು 8,000 ಪುಸ್ತಕಗಳನ್ನು ಖರೀದಿಸಲಾಗಿದೆ.

************

ಕುಲಸಚಿವರು
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ - ೫೮೦ ೦೨೫